# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಕವಿಪ್ರನಿನಿ/ಬಿ93/35989/2019-20 | CYS-5

ನಿಗಮ ಕಾರ್ಯಾಲಯ,
ಕಾವೇರಿ ಭವನ, ಬೆಂಗಳೂರು.
ದಿನಾಂಕ: 26 MAY 2021

### ಸುತ್ತೋಲೆ

ವಿಷಯ: ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ಅಧಿಕಾರಿ/ನೌಕರರು ನಿವೃತ್ತಿ ಹೊಂದಿದಲ್ಲಿ/ರಾಜೀನಾಮೆ ಸಲ್ಲಿಸಿದಲ್ಲಿ/ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಸಂಬಂಧಿಸಿದ ನೌಕರರಿಗೆ/ಅವರ ವಾರಸುದಾರರಿಗೆ ನೌಕರರ ಖಾತೆಯಲ್ಲಿರುವ ಸಂಚಿತ ಪಿಂಚಣಿ ಮೊಬಲಗನ್ನು ಹಿಂಪಡೆಯುವಾಗ ಅನುಸರಿಸಬೇಕಾದ ಕ್ರಮದ ಬಗ್ಗೆ.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/2018-19 ದಿನಾಂಕ:19.07.2019.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/2019-20 ದಿನಾಂಕ:31.10.2019.

| | |
|---|---|
| EE (IT) | |
| EE (IT)-1 | ✓ |
| EE (IT) (NW&DC) | |
| EE (MIS) | |
| DCA (IT) | |

SEE (IT & MIS) KPTCL

******

ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರು ವಯೋನಿವೃತ್ತಿ ಹೊಂದಿದಲ್ಲಿ, ಸೇವೆಯಲ್ಲಿದ್ದಾಗಲೇ ಮರಣ ಹೊಂದಿದಲ್ಲಿ ಮತ್ತು ವಯೋ ನಿವೃತ್ತಿಗೂ ಮೊದಲು ನಿಗಮದ ನಿಯಾಮಾನುಸಾರ ಸೇವೆಯಿಂದ ಹೊರಹೋಗ ಬಯಸಿದ ಸಂದರ್ಭದಲ್ಲಿ, ಸಂಬಂಧಪಟ್ಟ ಅಧಿಕಾರಿ/ನೌಕರರು ಹಾಗೂ ಅವರ ಅರ್ಹ ವಾರಸುದಾರರು/ನಾಮನಿರ್ದೇಶಿತರಿಗೆ ಸಂಚಿತ ಪಿಂಚಣಿ ಮೊತ್ತವನ್ನು ಹಿಂಪಾವತಿಸುವ ಸಂಬಂಧ ಕವಿಪ್ರನಿನಿ/ಎಲ್ಲಾ ವಿಸಕಂಗಳ ಲೆಕ್ಕಘಟಕಗಳು ಅನುಸರಿಸಬೇಕಾದ ಕ್ರಮುಗಳ ಬಗ್ಗೆ ಹಾಗೂ ಸಂಬಂಧಪಟ್ಟ ನೌಕರರು ಹಾಗೂ ನಾಮನಿರ್ದೇಶಿತರು/ಅರ್ಹ ವಾರಸುದಾರರು ಲೆಕ್ಕಘಟಕಗಳಿಗೆ ಸಲ್ಲಿಸಬೇಕಾದ ದಾಖಲೆಗಳ ಕುರಿತಂತೆ ಹಾಗೂ ಲೆಕ್ಕಘಟಕಗಳು ಸಲ್ಲಿಸಬೇಕಾದ ಪ್ರಸ್ತಾವನೆಗಳಿಗೆ ಉಲ್ಲೇಖಿತ ಆದೇಶದಲ್ಲಿ ವಿವರಿಸಲಾಗಿದೆ.

ಆದಾಗ್ಯೂ, ಈ ಯೋಜನೆಯ ಅಧಿಕಾರಿ/ನೌಕರರು/ಅವರ ವಾರಸುದಾರರು/ನಾಮನಿರ್ದೇಶಿತರು ಮೇಲಿನ ಸಂಧರ್ಭಗಳಲ್ಲಿ ಎಲ್‌ಐಸಿ(ಪಿ&ಜಿಎಸ್) ಸಂಸ್ಥೆಯಿಂದ ಸಂಚಿತ ಪಿಂಚಣಿ ಮೊತ್ತವನ್ನು ಹಿಂಪಡೆಯಲು ಸಲ್ಲಿಸುವ "ಎಲ್‌ಐಸಿಯ ಕ್ಲೇಮ್ ಅರ್ಜಿಗಳನ್ನು ಪೂರ್ಣವಾಗಿ ಭರ್ತಿ ಮಾಡದೆ" ಹಾಗೂ "ಪೆನ್ಷನ್ ಪಾವತಿ ಆಯ್ಕೆಯನ್ನು ಸೂಚಿಸದೆ" ಅಪೂರ್ಣ ದಾಖಲಾತಿಗಳೊಂದಿಗೆ ಪ್ರಸ್ತಾವನೆಗಳನ್ನು ಲೆಕ್ಕಘಟಕಗಳು ಈ ಕಚೇರಿಗೆ ಸಲ್ಲಿಸುತ್ತಿರುವುದರಿಂದ ಪಿಂಚಣಿ ಮೊತ್ತವನ್ನು ಸಂಬಂಧಿಸಿದವರಿಗೆ ಹಿಂಪಾವತಿಸಲು ಕ್ರಮವಹಿಸಲು ವಿಳಂಬವಾಗುತ್ತಿದೆ ಮತ್ತು ಹಲವು ವಾರಸುದಾರರು ಪಿಂಚಣಿಗೆ ಸಂಬಂಧಿಸಿದಂತೆ, "ಆಯ್ಕೆಯ ಮಾದರಿಗಳಲ್ಲಿ ಸೂಕ್ತವಾದದ್ದು ಯಾವುದು ಅನ್ನುವ ವಿಷಯದ ಬಗ್ಗೆ ಈ ಕಚೇರಿಗೆ ಸ್ಪಷ್ಟೀಕರಣವನ್ನು ವಿವರಿಸಲು ದೂರವಾಣಿ ಮುಖೇನ ಮನವಿ ಮಾಡುತ್ತಿರುತ್ತಾರೆ."

ಈ ಹಿನ್ನೆಲೆಯಲ್ಲಿ ಎಲ್ಲಾ ಲೆಕ್ಕಘಟಕಗಳು ಮೇಲಿನ ಸಂಧರ್ಭಗಳಲ್ಲಿ ಅಧಿಕಾರಿ/ನೌಕರರಿಗೆ ಮತ್ತು ಅವರ ನಾಮನಿರ್ದೇಶಿತರು/ಕಾನೂನು ಬದ್ಧ ವಾರಸುದಾರರಿಗೆ ಈ ಕೆಳಕಂಡ ಅಂಶಗಳನ್ನು ಹಾಗೂ "ಎಲ್‌ಐಸಿ(ಪಿ&ಜಿಎಸ್)

ರವರ ಆನ್ಯೂಟಿಯಲ್ಲಿ ಹೂಡಿಕೆ ಮಾಡಬಹುದಾದ ಎಲ್‌ಐಸಿಯಲ್ಲಿ ಪ್ರಸ್ತುತ ಲಭ್ಯವಿರುವ ಪಿಂಚಣಿಯ ವಿವಿದ ಆಯ್ಕೆಯ ಮಾದರಿಗಳ" ಮಾಹಿತಿ ಈ ಕೆಳಕಂಡಂತೆ ಇರುತ್ತದೆ.

## Payment of Pension: ಪಿಂಚಣಿ ಪಾವತಿ

(ಎಲ್‌ಐಸಿ ಕ್ಲೇಮ್ ನಮೂನೆಯ ಕ್ರಮ ಸಂಖ್ಯೆ: 2.A ರಲ್ಲಿರುವಂತೆ)

a) Pension for life: In this, the pension money would be paid to the pensioner till his life. After his life, no money would be paid to his nominee. Therefore in this option the pension amount is high.

ಎ) ಜೀವಿತಾವಧಿ ಪಿಂಚಣಿ: ಈ ಆಯ್ಕೆಯಲ್ಲಿ, ಪಿಂಚಣಿ ಹಣವನ್ನು ಪಿಂಚಣಿದಾರರಿಗೆ ಅವನ ಜೀವಿತಾವಧಿಯವರೆಗೆ ಪಾವತಿಸಲಾಗುತ್ತದೆ. ಪಿಂಚಣಿದಾರ ಮರಣ ಹೊಂದಿದ ನಂತರ, ಅವರ ನಾಮಿನಿಗೆ ಯಾವುದೇ ಹಣವನ್ನು ಪಾವತಿಸಲಾಗುವುದಿಲ್ಲ. ಆದ್ದರಿಂದ ಈ ಆಯ್ಕೆಯಲ್ಲಿ ಪಿಂಚಣಿ ಮೊತ್ತ ಹೆಚ್ಚು.

b) Pension for life with return of Corpus : In this , the pensioner will get the pension money till his life and after his life, the corpus would be paid to the nominee in lump sum. Therefore in this option the pension amount is comparatively less.

ಬಿ) ಜೀವಿತಾವದಿ ಪಿಂಚಣಿ ಹಾಗೂ ನಂತರ ಕಾರ್ಪಸ್‌ನ ಹಿಂಪಾವತಿ: ಈ ಆಯ್ಕೆಯಲ್ಲಿ, ಪಿಂಚಣಿದಾರನು ತನ್ನ ಜೀವಿತಾವಧಿಯವರೆಗೆ ಪಿಂಚಣಿ ಹಣವನ್ನು ಪಡೆಯುತ್ತಾನೆ ಮತ್ತು ಅವನ ಮರಣದ ನಂತರ, ಕಾರ್ಪಸ್ ಅನ್ನು ನಾಮಿನಿಗೆ ಪಾವತಿಸಲಾಗುತ್ತದೆ. ಆದ್ದರಿಂದ ಈ ಆಯ್ಕೆಯಲ್ಲಿ ಪಿಂಚಣಿ ಮೊತ್ತವು ತುಲನಾತ್ಮಕವಾಗಿ ಕಡಿಮೆ ಇರುತ್ತದೆ.

c) Pension guaranteed for 5/10/15/20 years and life thereafter : In this, there is a capping of 5/10/15/20 years, i.e. if within 5/10/15/20 years, any unfortunate event happens, then the nominee would get the pension money for the balance number of guaranteed period, in the same manner as the pensioner was getting. But, if the member survives after 5/10/15/20 years, then pension will be paid to member till his life. No amount will be paid to the nominee. Therefore in this option also the pension amount is high.

ಸಿ) 5/10/15/20 ವರ್ಷಗಳು ಮತ್ತು ನಂತರದ ಜೀವನಕ್ಕೆ ಪಿಂಚಣಿ ಖಾತರಿ: ಈ ಆಯ್ಕೆಯಲ್ಲಿ, 5/10/15/20 ವರ್ಷಗಳ ಮಿತಿ (ಕ್ಯಾಪಿಂಗ್) ಇದೆ, ಅಂದರೆ 5/10/15/20 ವರ್ಷಗಳಲ್ಲಿ ಪಿಂಚಣಿದಾರರು ಮರಣ ಹೊಂದಿದಲ್ಲಿ, ಪಿಂಚಣಿ ಹಣವನ್ನು ಪಿಂಚಣಿದಾರನು ಪಡೆಯುವ ರೀತಿಯಲ್ಲಿಯೇ ಖಾತರಿ ಪಡಿಸಿದ ಅವಧಿಯ ಬಾಕಿ ವರ್ಷಗಳಿಗೆ ನಾಮಿನಿಯು ಪಿಂಚಣಿಯನ್ನು ಪಡೆಯಲು ಅವಕಾಶವಿರುತ್ತದೆ. ಆದರೆ, ಸದಸ್ಯ 5/10/15/20 ವರ್ಷಗಳ ನಂತರ ಬದುಕುಳಿದರೆ, ಪಿಂಚಣಿದಾರನಿಗೆ ಅವನ ಜೀವಿತಾವಧಿಯವರೆಗೆ ಪಿಂಚಣಿ ನೀಡಲಾಗುತ್ತದೆ. ನಾಮಿನಿಗೆ ಯಾವುದೇ ಮೊತ್ತವನ್ನು ಪಾವತಿಸಲಾಗುವುದಿಲ್ಲ. ಆದ್ದರಿಂದ ಈ ಆಯ್ಕೆಯಲ್ಲಿ ಪಿಂಚಣಿ ಮೊತ್ತವೂ ಹೆಚ್ಚು.

d) Joint Life Pension (100%). Annuity for life with a provision for 100% of the Annuity payable to Spouse on death of the Annuitant: In this case pension is paid to the member till his life, and the

same pension will be extended to the spouse till her life. After the second life, nothing is payable to nominee.

ಡಿ) <u>ಜಂಟಿ ಜೀವಿತಾವಧಿ ಪಿಂಚಣಿ (100%)</u>: ಈ ಪಿಂಚಣಿಯನ್ನು ಆಯ್ಕೆ ಮಾಡಿಕೊಂಡಲ್ಲಿ, ಪಿಂಚಣಿದಾರನಿಗೆ ಅವನ ಜೀವಿತಾವಧಿಯವರೆಗೆ ಪಿಂಚಣಿ ನೀಡಲಾಗುತ್ತದೆ ಮತ್ತು ಪಿಂಚಣಿದಾರನ ಮರಣದ ನಂತರ ಅದೇ ಪಿಂಚಣಿಯನ್ನು ಅಂದರೆ, ಜೀವಿತಾವಧಿಯ ವರ್ಷಾಶನದಲ್ಲಿ ಶೇ.100 ರಷ್ಟು ವರ್ಷಾಶನವನ್ನು ಅವರ ಪತಿ/ಪತ್ನಿ ರವರ ಜೀವಿತಾವಧಿಯವರೆಗೆ ವಿಸ್ತರಿಸಲಾಗುತ್ತದೆ. ಪಿಂಚಣಿದಾರನ ಪತಿ/ಪತ್ನಿಯು ಮರಣ ಹೊಂದಿದ ನಂತರ ನಾಮಿನಿಗೆ ಯಾವುದೇ ಮೊತ್ತವನ್ನು ಪಾವತಿಸುವುದಿಲ್ಲ.

e) <u>Joint Life Pension (100%) with Return of Corpus (ROC). Annuity for life with a provision for 100% of the annuity payable to the Spouse on death of the annuitant with Return of purchase price on the death of annuitant:</u> In this case pension is paid to the member till his life, and 100% of the pension will be extended to the spouse till her life. After the second life, Corpus amount is payable to nominee.

ಇ) <u>ಜಂಟಿ ಜೀವಿತಾವದಿ ಪಿಂಚಣಿ (100%) ಯೊಂದಿಗೆ ಕಾರ್ಪಸ್‌ನ ಹಿಂಪಾವತಿ:</u> ಈ ಆಯ್ಕೆಯಲ್ಲಿ ಪಿಂಚಣಿದಾರರಿಗೆ ಜೀವಿತಾವಧಿಯವರೆಗೆ ಶೇಕಡ 100 ರಷ್ಟು ಪಿಂಚಣಿ ನೀಡಲಾಗುವುದು. ಇವರು ಮರಣ ಹೊಂದಿದ ನಂತರ ಇವರ ಪತಿ/ಪತ್ನಿ ರವರಿಗೆ ಜೀವಿತಾವಧಿಯವರೆಗೆ ಶೇಕಡ 100 ರಷ್ಟು ಪಿಂಚಣಿ ವಿಸ್ತರಿಸಲಾಗುವುದು. ಪಿಂಚಣಿದಾರರ ಪತಿ/ಪತ್ನಿಯ ಮರಣದ ನಂತರ ಕಾರ್ಪಸ್ ಅನ್ನು ನಾಮಿನಿಗೆ ಪಾವತಿಸಲಾಗುವುದು.

f) <u>Joint Life Pension (50%). Annuity for life with a provision for 50% of the annuity payable to the Spouse on the death of the annuitant</u>: In this case pension is paid to the member till his life, and 50% of the pension will be extended to the spouse till her life, after the second life, nothing is payable to nominee.

ಎಫ್) <u>ಜಂಟಿ ಜೀವಿತಾವದಿ ಪಿಂಚಣಿ(50%):</u> ಈ ಆಯ್ಕೆಯಲ್ಲಿ ಪಿಂಚಣಿದಾರನಿಗೆ ಜೀವಿತಾವಧಿಯವರೆಗೆ ಪಿಂಚಣಿ ನೀಡಲಾಗುತ್ತದೆ ಮತ್ತು ಇವರು ಮರಣ ಹೊಂದಿದ ನಂತರ ಶೇಕಡ 50 ರಷ್ಟು ಪಿಂಚಣಿಯನ್ನು ಇವರ ಪತಿ/ಪತ್ನಿಗೆ ವಿಸ್ತರಿಸಲಾಗುತ್ತದೆ. ಪಿಂಚಣಿದಾರರ ಪತಿ/ಪತ್ನಿಯ ಮರಣದ ನಂತರ, ನಾಮಿನಿಗೆ ಯಾವುದೇ ಮೊತ್ತವನ್ನು ಪಾವತಿಸುವುದಿಲ್ಲ.

g) <u>Pension for life increasing at a simple rate of 3% p.a. :</u> In this case pension is paid to the member till his life and every year the rate of pension increases at 3% simple interest of the basic pension.

ಜಿ) <u>ಜೀವಿತಾವದಿ ಪಿಂಚಣಿ (3% ವಾರ್ಷಿಕ ಬಡ್ಡಿಯೊಂದಿಗೆ).</u>: ಈ ಆಯ್ಕೆಯಲ್ಲಿ ಪಿಂಚಣಿದಾರರಿಗೆ ಅವನ ಜೀವಿತಾವಧಿಯವರೆಗೆ ಪಿಂಚಣಿ ನೀಡಲಾಗುತ್ತದೆ ಮತ್ತು ಪ್ರತಿ ವರ್ಷ ಮೂಲ ಪಿಂಚಣಿಯ ಮೇಲೆ ಶೇಕಡ 3 ರಂತೆ ಸಾಮಾನ್ಯ ಬಡ್ಡಿ ದರವನ್ನು ಸೇರಿಸಿ ಪಿಂಚಣಿಯನ್ನು ಹೆಚ್ಚಿಸಿ ಪಾವತಿಸಲಾಗುತ್ತದೆ.

<u>NOTE</u>: 1) In case of Joint Pension Options (d), (e) & (f) Applicant has to furnish the Date of birth of Spouse with Aadhar Card.

ಜಂಟಿ ಪಿಂಚಣಿ ಆಯ್ಕೆಗಳ ಸಂದರ್ಭದಲ್ಲಿ (ಡಿ), (ಇ) ಮತ್ತು (ಎಫ್) ಅರ್ಜಿದಾರರು ಪತಿ/ಪತ್ನಿ ಹುಟ್ಟಿದ ದಿನಾಂಕವನ್ನು ಆಧಾರ್ ಕಾರ್ಡ್‌ನೊಂದಿಗೆ ಒದಗಿಸಬೇಕು.

## 2) Return of Corpus Option available only in case of Option (b) & (e)

ಆಯ್ಕೆ (ಬಿ) ಮತ್ತು (ಇ) ಸಂದರ್ಭದಲ್ಲಿ ಮಾತ್ರ ಕಾರ್ಪಸ್ ಅನ್ನು ಹಿಂತಿರುಗಿಸಲಾಗುವುದು.

ದಿನಾಂಕ:19.07.2019 (ಉಲ್ಲೇಖ-1) ಮತ್ತು ದಿನಾಂಕ:31.10.2019 (ಉಲ್ಲೇಖ-2)ರ ನಿಗಮದ ಆದೇಶಗಳಂತೆ ಈ ಕೆಳಕಂಡ ವಿವಿಧ ಸಂದರ್ಭಗಳಲ್ಲಿ ಸಂಚಿತ ಪಿಂಚಣಿ ನಿಧಿಯಲ್ಲಿ ಹಿಂಪಡೆಯ ಬಹುದಾದ ಹಾಗೂ ಅನ್ಯೂಟಿಯಲ್ಲಿ ತೊಡಗಿಸಬಹುದಾದ ಶೇಕಡಾವಾರು ವಿವರಗಳನ್ನು ಮತ್ತೊಮ್ಮೆ ಸಂಕ್ಷಿಪ್ತವಾಗಿ ವಿವರಿಸಿದೆ:-

| ಕ್ರ.ಸಂ | ವಿವರಗಳು | ಸಂಚಿತ ಪಿಂಚಣಿ ನಿಧಿಯಲ್ಲಿ ಹಿಂಪಡೆಯುಬಹುದಾದ ಶೇಕಡಾವಾರು ಮೊಬಲಗು | ಸಂಚಿತ ಪಿಂಚಣಿ ನಿಧಿಯಲ್ಲಿ ತೊಡಗಿಸಬಹುದಾದ ಶೇಕಡಾವಾರು ಅನ್ಯುಟಿ ಮೊಬಲಗು |
|---|---|---|---|
| ಅ | ಸೇವೆಯಿಂದ ವಯೋನಿವೃತ್ತಿ ಹೊಂದಿದಾಗ (Superannuation) | 60% | 40% |
| | | ಕ್ರೋಢೀಕೃತ ಪಿಂಚಣಿ ನಿಧಿಯ ಮೊತ್ತ ರೂ.2 ಲಕ್ಷ ಅಥವಾ ಕಡಿಮೆ ಇದ್ದಲ್ಲಿ ಸದರಿ ಅಧಿಕಾರಿ/ನೌಕರರು ಅನ್ಯುಟಿಯಲ್ಲಿ ತೊಡಗಿಸದೆ ಪೂರ್ಣ ಮೊತ್ತವನ್ನು ಹಿಂಪಡೆಯಬಹುದಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಸದರಿಯವರಿಗೆ ಈ ಯೋಜನೆಯಡಿ ಯಾವುದೇ ಪಿಂಚಣಿಗೆ ಅವಕಾಶವಿರುವುದಿಲ್ಲ. | |
| ಆ | ವಯೋನಿವೃತ್ತಿಗೂ ಮೊದಲು ಯಾವುದೇ ಕಾರಣದಿಂದ ಸೇವೆಗೆ ರಾಜೀನಾಮೆ ಸಲ್ಲಿಸಿದಲ್ಲಿ/ಸ್ವಯಂ ನಿವೃತ್ತಿ ಹೊಂದಿದಲ್ಲಿ (Resignation/Voluntary retirement) | 20% | 80% |
| | | ಕ್ರೋಢೀಕೃತ ಪಿಂಚಣಿ ನಿಧಿಯ ಮೊತ್ತ ರೂ.1 ಲಕ್ಷ ಅಥವಾ ಕಡಿಮೆ ಇದ್ದಲ್ಲಿ ಸದರಿ ಅಧಿಕಾರಿ/ನೌಕರು ಅನ್ಯುಟಿಯಲ್ಲಿ ತೊಡಗಿಸದೆ ಪೂರ್ಣ ಮೊತ್ತವನ್ನು ಹಿಂಪಡೆಯಬಹುದಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಸದರಿಯವರಿಗೆ ಈ ಯೋಜನೆಯಡಿ ಯಾವುದೇ ಪಿಂಚಣಿಗೆ ಅವಕಾಶವಿರುವುದಿಲ್ಲ. | |
| ಇ | ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ (Death while in service) | 20% | 80% |
| | | ಕ್ರೋಢೀಕೃತ ಪಿಂಚಣಿ ನಿಧಿಯ ಮೊತ್ತ ರೂ.2 ಲಕ್ಷ ಅಥವಾ ಕಡಿಮೆ ಇದ್ದಲ್ಲಿ, ಮರಣ ಹೊಂದಿರುವ ಅಧಿಕಾರಿ/ನೌಕರರುಗಳ ವಾರಸುದಾರರು ಅನ್ಯುಟಿಯಲ್ಲಿ ತೊಡಗಿಸದೆ ಪೂರ್ಣ ಮೊತ್ತವನ್ನು ಹಿಂಪಡೆಯಬಹುದಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ಸದರಿಯವರಿಗೆ ಈ ಯೋಜನೆಯಡಿ ಯಾವುದೇ ಪಿಂಚಣಿಗೆ ಅವಕಾಶವಿರುವುದಿಲ್ಲ. | |
| ಈ | ಸೇವೆಯಿಂದ ವಜಾಗೊಂಡ ಸಂದರ್ಭದಲ್ಲಿ (Dismissal) | ಪಿಪಿಎಎನ್ ಖಾತೆಯಲ್ಲಿರುವ ಅಧಿಕಾರಿ/ನೌಕರರ ಭಾಗದ ಪಿಂಚಣಿ ವಂತಿಗೆಯ ಕ್ರೋಢೀಕೃತ ಮೊತ್ತ ಮತ್ತು ಅದರ ಮೇಲೆ ಗಳಿಸಲಾದ ಆದಾಯವನ್ನು ಮಾತ್ರ ಅಧಿಕಾರಿ/ನೌಕರರಿಗೆ ಅಥವಾ ವಜಾಗೊಂಡ ಅಧಿಕಾರಿ/ನೌಕರರು ಮೃತ ಪಟ್ಟಿದ್ದಲ್ಲಿ ಅವರ ನಾಮನಿರ್ದೇಶಿತರಿಗೆ/ಕುಟುಂಬದವರಿಗೆ ಇತ್ಯರ್ಥ ಪಡಿಸತಕ್ಕದ್ದು ಹಾಗೂ ಪಿಪಿಎಎನ್ ಖಾತೆಯಲ್ಲಿರುವ ಉದ್ಯೋಗದಾತರ (Employer's portion) ಮೊತ್ತ ಮತ್ತು ಅದರ ಮೇಲಿನ ಆದಾಯವನ್ನು ನಿಗಮದ/ಎಸ್ಕಾಂಗಳ ಆದಾಯದ ಲೆಕ್ಕಕ್ಕೆ ಜಮೆ ಮಾಡುವುದು. | |

ಮುಂದುವರೆದಂತೆ, ಈ ಸಂಬಂಧ ವಯೋನಿವೃತ್ತಿ ಹೊಂದಿದ, ವಯೋ ನಿವೃತ್ತಿಗೂ ಮೊದಲು ಸೇವೆಗೆ ರಾಜೀನಾಮೆ ಸಲ್ಲಿಸಿದ, ಸ್ವಯಂ ನಿವೃತ್ತಿ ಹೊಂದಿದ ನೌಕರರ ಅಥವಾ ಮೃತ ಹೊಂದಿದ ನೌಕರರ ನಾಮನಿರ್ದೇಶಿತರು/

ಅರ್ಹ ವಾರಸುದಾರರಿಂದ ಸಂಚಿತ ಪಿಂಚಣಿ ನಿಧಿಯ ಪಾವತಿಗಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸುವ ಅರ್ಜಿಗಳನ್ನು ಸಂಬಂಧಪಟ್ಟ ಕಚೇರಿಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಸಮುಚಿತ ಮಾರ್ಗದ ಮೂಲಕ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡ ದಾಖಲೆಗಳೊಂದಿಗೆ ಸಲ್ಲಿಸುವಂತೆ ತಿಳಿಸಲಾಗಿದೆ.

ಸಂಚಿತ ಪಿಂಚಣಿ ನಿಧಿಯನ್ನು ಹಿಂಪಡೆಯಲು ಹಾಗೂ ಆನ್ಯೂಟಿಯಲ್ಲಿ ತೊಡಗಿಸಲು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವರಗಳನ್ನು ದಿನಾಂಕ:19.07.2019ರ ನಿಗಮದ ಆದೇಶದಲ್ಲಿನ ಅನುಬಂಧದ ಸಾರಾಂಶವನ್ನು (Extract) ಸಂಕ್ಷಿಪ್ತವಾಗಿ ಮತ್ತೊಮ್ಮೆ ವಿವರಿಸಿದೆ:-

<table>
<tr><th>ಕ್ರ.ಸಂ</th><th>ವಿವರಗಳು</th><th>ನೌಕರರು ಸಲ್ಲಿಸಬೇಕಾದ ದಾಖಲೆಗಳು</th></tr>
<tr><td>ಅ</td><td>ಸೇವೆಯಿಂದ ವಯೋನಿವೃತ್ತಿ ಹೊಂದಿದಾಗ<br>(Superannuation)</td><td rowspan="2">• ದೃಢೀಕೃತ ಭಾವ ಚಿತ್ರ<br>• ನಿವಾಸ ಪುರಾವೆಯ ಪ್ರತಿ<br>• ರದ್ದುಗೊಳಿಸಿರುವ ಚೆಕ್/ಬ್ಯಾಂಕ್ ದೃಢೀಕರಣ, ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಬುಕ್‌ನ ಮೊದಲ ಹಾಳೆಯ ಪ್ರತಿ, ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಸಂಖ್ಯೆ<br>• ನೇರ ಕ್ರೆಡಿಟ್ ಆದೇಶ (Direct Credit Mandate)<br>• ದೃಢೀಕೃತ ಎಲ್‌ಐಸಿಯ ಕ್ಲೇಮ್ ನಮೂನೆ (ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರುವ)<br>• ಕಾನೂನು ಬದ್ಧ ವಾರಸುದಾರರ ಪ್ರಮಾಣ ಪತ್ರ<br>• ರಾಜೀನಾಮೆ ಅಂಗೀಕೃತವಾಗಿರುವ ಹಾಗೂ ಕಾರ್ಯವಿಮುಕ್ತಿ ಹೊಂದಿದ ಅಧಿಕೃತ ಜ್ಞಾಪನಾ ಪತ್ರದ ಪ್ರತಿ<br>• ಅಧಿಕಾರಿ/ನೌಕರನ ಸೇವಾವಧಿಯಲ್ಲಿ ಕಡಿತಗೊಳಿಸಲಾಗಿರುವ ಪಿಂಚಣಿ ವಂತಿಗೆಯ ವಿವರಗಳುಳ್ಳ ದೃಢೀಕೃತ ಪ್ರತಿ</td></tr>
<tr><td>ಆ</td><td>ವಯೋನಿವೃತ್ತಿಗೂ ಮೊದಲು ಯಾವುದೇ ಕಾರಣದಿಂದ ಸೇವೆಗೆ ರಾಜೀನಾಮೆ ಸಲ್ಲಿಸಿದಲ್ಲಿ/ಸ್ವಯಂ ನಿವೃತ್ತಿ/ ಸೇವೆಯಿಂದ ವಜಾಗೊಂಡಲ್ಲಿ<br>(Resignation/Voluntary retirement/Dismissal)</td></tr>
<tr><td rowspan="2">ಇ</td><td rowspan="2">ಸೇವೆಯಲ್ಲಿರುವಾಗಲೇ ಮರಣ ಹೊಂದಿದಲ್ಲಿ<br>(Death while in service)</td><td>ವಾರಸುದಾರರು ಸಲ್ಲಿಸಬೇಕಾದ ದಾಖಲೆಗಳು</td></tr>
<tr><td>• ದೃಢೀಕೃತ ಭಾವ ಚಿತ್ರ<br>• ನಿವಾಸ ಪುರಾವೆಯ ಪ್ರತಿ<br>• ವಾರಸುದಾರರ/ನಾಮ ನಿರ್ದೇಶಿತರ ಬ್ಯಾಂಕ್ ಖಾತೆಯ ರದ್ದುಗೊಳಿಸಿರುವ ಚೆಕ್/ಬ್ಯಾಂಕ್ ದೃಢೀಕರಣ, ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಬುಕ್‌ನ ಮೊದಲ ಹಾಳೆಯ ಪ್ರತಿ, ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಸಂಖ್ಯೆ<br>• ನೇರ ಕ್ರೆಡಿಟ್ ಆದೇಶ (Direct Credit Mandate)<br>• ಪ್ಯಾನ್ ಸಂಖ್ಯೆ<br>• ದೃಢೀಕೃತ ಎಲ್‌ಐಸಿಯ ಕ್ಲೇಮ್ ನಮೂನೆ</td></tr>
</table>

| | | |
|---|---|---|
| | | (ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರುವ)<br>• ಕಾನೂನು ಬದ್ಧ ವಾಸರುದಾರರ ಪ್ರಮಾಣ ಪತ್ರ<br>• ಮರಣ ಪ್ರಮಾಣ ಪತ್ರ<br>• ಅಧಿಕಾರಿ/ನೌಕರನ ಸೇವಾವಧಿಯಲ್ಲಿ ಕಡಿತಗೊಳಿಸಲಾಗಿರುವ ಪಿಂಚಣಿ ವಂತಿಗೆಯ ವಿವರಗಳುಳ್ಳ ದೃಢೀಕೃತ ಪ್ರತಿ |

ಇನ್ನುಳಿದಂತೆ ದಿನಾಂಕ:19.07.2019ರ ನಿಗಮದ ಆದೇಶದಲ್ಲಿನ ಇತರೆ ಅಂಶಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

ನಿರ್ದೇಶಕರು(ಆಡಳಿತ ಮತ್ತು ಮಾ.ಸಂ),
ಕವಿಪ್ರನಿನಿ

**ಪ್ರತಿಗಳು:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿಸಿಕೆಎಲ್
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು
4. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ವಿಸಕಂ/ಪಿಸಿಕೆಎಲ್
5. ಹಿರಿಯ ಆಪ್ತ ಕಾರ್ಯದರ್ಶಿಗಳು ರವರು ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು (ಹಣಕಾಸು), ಕವಿಪ್ರನಿನಿ ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು ನಿರ್ದೇಶಕರುಗಳ ಗಮನಕ್ಕೆ ತರಲು ವ್ಯವಸ್ಥೆ ಮಾಡುವುದು.

   **ಅಧೀಕ್ಷಕ ಇಂಜನಿಯರ್(ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು <u>www.kptcl.com>eprasarana</u> ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.**
6. ಎಲ್ಲಾ ಅಧೀಕ್ಷಕ ಇಂಜನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂ
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು
8. ಎಲ್ಲಾ ಅಧಿಕಾರಿಗಳು, ಕವಿಪ್ರನಿನಿ/ವಿಸಕಂಗಳು

**<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-</u>**

1) ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2) ಶ್ರೀ.ಶಿವಪ್ರಕಾಶ್.ಟಿ.ಎಂ, ಅಧ್ಯಕ್ಷರು, ಕವಿಪ್ರನಿನಿ ಇಂಜನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3) ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ (ನೋದಣಿ ಸಂಖ್ಯೆ:659), ಬೆಂಗಳೂರು.
4) ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5) ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6) ಪ್ರಧಾನ ಕಾಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7) ಪ್ರದಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜನಿಯರ್‌ಗಳ ಸಂಘ, ಬೆಂಗಳೂರು.
8) ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.